



ಎಲ್ಲೋರಾದ ಗುಹಾಂತರ ದೇಗುಲಗಳು ಚಿತ್ರಕಲೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳ ಅತ್ಯಪರೂಪದ ಸಮ್ಮಿಲನ. ಅದೂ ಒಂದೇ ಸ್ಥಳದಲ್ಲಿ ಮೂರು ಧರ್ಮಗಳ ಕಲೆ ಮತ್ತು ವಾಸ್ತುಶಿಲ್ಪಗಳನ್ನು ನೋಡಿ, ವಿಮರ್ಶಿಸಿ, ತೌಲನಿಕವಾಗಿ ಅಧ್ಯಯನ ಮಾಡಲು ಸುವರ್ಣಾವಕಾಶ ಒದಗಿಸಿಕೊಡುವ ಅದ್ಭುತ ತಾಣ. ಅಲ್ಲಿಯ ಕೈಲಾಸ ದೇವಾಲಯದ ಮುಂದೆ ನಿಂತರಂತೂ ಇಂಥದ್ದೊಂದು ಅಸಾಮಾನ್ಯ ನಿರ್ಮಾಣ ಸಾಧ್ಯವೇ ಎನ್ನುವ ಬೆರಗು ತಾನೇ ತಾನಾಗಿ ಮೂಡಿಬಿಡುತ್ತದೆ.

ಎಲ್ಲೋರಾ ಮತ್ತು ಅಜಂತಾ ಗುಹೆಗಳು ನಾನಂದುಕೊಂಡಂತೆ ಅಕ್ಕಪಕ್ಕದಲ್ಲಿ ಇಲ್ಲ ಎನ್ನುವುದು ಅಲ್ಲಿ ಹೋದಾಗಲೇ ಗೊತ್ತಾದದ್ದು. ಮಹಾರಾಷ್ಟ್ರದ ಔರಂಗಾಬಾದ್‌ನಿಂದ ಸುಮಾರು 30 ಕಿ.ಮೀ.ಗಳಷ್ಟು ದೂರದಲ್ಲಿ ಎಲ್ಲೋರಾ ಇದ್ದರೆ, ಅಜಂತಾಕ್ಕೆ ಹೋಗಲು ಇನ್ನೂ 100 ಕಿ.ಮೀ. ಮುಂದೆ ಪ್ರಯಾಣಿಸಬೇಕು. ಹಳ್ಳತಿಟ್ಟುಗಳ ರಸ್ತೆ, ಪ್ರಯಾಣದ ಖುಷಿಯನ್ನು ಕಸಿಯುವ ಹುನ್ನಾರ ಮಾಡುತ್ತದೆ. ದಾರಿಯಲ್ಲಿ ಮಹಾರಾಷ್ಟ್ರದ ಪ್ರಸಿದ್ಧ ಪೈಠಣೀ ರೇಷ್ಮೆ ಸೀರೆ, ಹಿಮ್‌ರೂ ರೇಷ್ಮೆಯ ಶಾಲಿನ ಅಂಗಡಿಗಳು ಕಾಣಸಿಗುತ್ತವೆ. ಸುತ್ತಮುತ್ತಲ ಪ್ರದೇಶದಲ್ಲಿ ನೇಯುವ ಸೀರೆಗಳನ್ನು ಕಡಿಮೆ ದರದಲ್ಲಿ ಕೊಳ್ಳುವ ಅವಕಾಶವಿದ್ದುದರಿಂದ ದಾರಿಯ ಆಯಾಸ ಕಾಣಿಸಲೇ ಇಲ್ಲ. ದಾರಿಯುದ್ದಕ್ಕೂ ಫಲವತ್ತಾದ ಕಪ್ಪು ಮಣ್ಣಿನಲ್ಲಿ ಬೆಳೆದ ಜೋಳ, ಸಜ್ಜೆ, ಗೋಧಿ, ಕಡಲೆ ಮತ್ತು ಹತ್ತಿಯ ಹೊಲಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ದೊಡ್ಡ ಹೋಟೆಲ್‌ಗಳು ಸಿಗದಿದ್ದರೂ ಪುಟ್ಟ ಢೇಲಾದಲ್ಲಿ ತಿಂದ ಮಹಾರಾಷ್ಟ್ರದ ನಿತ್ಯದ ಊಟವಾದ ಪಿಟ್ಲ, ಭಾಕ್ರಿ ಮತ್ತು ಠೇಚಾದ (ಕಡ್ಲೆ ಹಿಟ್ಟಿನ ಝುಣಕ, ಜೋಳದ ರೊಟ್ಟಿ ಮತ್ತು ಕಲ್ಲಿನ ಮೇಲೆ ಅರೆದ ಹಸಿಮೆಣಸಿನ ಚಟ್ನಿ) ತಾಜಾತನ ಮತ್ತು ರುಚಿ ಎರಡೂ ಮರೆಯಲಾಗದ್ದು. ಅಜಂತಾದ ಬೌದ್ಧ ಗುಹೆಗಳ ಶಿಲ್ಪ ಮತ್ತು ಚಿತ್ರಕಲೆಯ ಅನನ್ಯ ಸೌಂದರ್ಯವೂ ಮಂತ್ರಮುಗ್ಧಗೊಳಿಸುವಂತಹದ್ದು.

ಎಲ್ಲೋರಾದ ನೂರಕ್ಕೂ ಹೆಚ್ಚಿರುವ ಗುಹಾಂತರ ದೇವಾಲಯಗಳಲ್ಲಿ ಸಾರ್ವಜನಿಕರಿಗೆ ಮುಕ್ತವಾಗಿರುವುದು 34. ಬಹಳಷ್ಟು ಗುಹೆಗಳು ಪೂರ್ಣಗೊಂಡಿಲ್ಲ. ಅವುಗಳಲ್ಲಿ 1ರಿಂದ 12ರವರೆಗಿನ ಬೌದ್ಧ ಗುಹೆಗಳು ಮೊಟ್ಟಮೊದಲು ನಿರ್ಮಾಣಗೊಂಡವು. 13ರಿಂದ 29ನೇ ಗುಹೆಗಳು ಹಿಂದೂ ಮತ್ತು 30ರಿಂದ 34ನೇ ಗುಹೆಗಳು ಜೈನಧರ್ಮಕ್ಕೆ ಸೇರಿವೆ. ಹಿಂದೂಗಳು ದೇವಾಲಯವನ್ನು ನಿರ್ಮಿಸಿ, ಪುರಾಣಗಳ ಕಥೆಯನ್ನು ಮತ್ತು ಸಾಲುಸಾಲಾಗಿ ದೇವಾಧಿದೇವತೆಗಳನ್ನು ಕಟೆದು ತಮ್ಮ ಅದ್ಭುತ ಶಿಲ್ಪಕಲಾ ನೈಪುಣ್ಯವನ್ನು ಪ್ರದರ್ಶಿಸಿದರು. ಬೌದ್ಧರು ಪರಿಪೂರ್ಣವಾದ ವಿಹಾರಗಳನ್ನು, ಪ್ರಾರ್ಥನಾ ಸ್ಥಳಗಳನ್ನು ನಿರ್ಮಿಸಿ, ಬುದ್ಧ ಮತ್ತು ಬೋಧಿಸತ್ವರ ಚಿತ್ರಗಳಿಂದ ಅಲಂಕರಿಸಿದರೆ, ಜೈನರು ಬಸದಿಗಳನ್ನು ಕಟೆದು, ಮಹಾವೀರ ಮತ್ತು ತೀರ್ಥಂಕರರ ಜೀವನ ಚರಿತ್ರೆಯನ್ನು ಅತಿಸುಂದರವಾಗಿ ಚಿತ್ರಿಸಿದರು.

ಎಲ್ಲ ಗುಹೆಗಳೂ ಒಂದಕ್ಕಿಂತ ಒಂದು ಸುಂದರವಾಗಿವೆ. ಮೊದಲ ಗುಹೆಯಿಂದ ಕೊನೆಯ ಗುಹೆಯವರೆಗಿನ ದೂರ ಸುಮಾರು ಎರಡು ಕಿ.ಮೀ. ಆಗುವುದರಿಂದ ಸಮಯಾವಕಾಶ ಇಲ್ಲದವರು ಕನಿಷ್ಠ ಅತಿ ಪ್ರಮುಖವಾಗಿರುವ ಆರು ಗುಹೆಗಳನ್ನಾದರೂ ನೋಡಬೇಕು ಎನ್ನುವುದು ನಮ್ಮ ಗೈಡ್‌ನ ಮಾತು.

ನಾನಂತೂ ಒಂದಿಡೀ ದಿನ ಎಲ್ಲೋರಾದ ಮಾಯಾಲೋಕದಲ್ಲಿ ಕಳೆದುಹೋಗಿದ್ದೆ. ಮೋಡ ಕವಿದ, ಕೆಲವೊಮ್ಮೆ ಜಿಟಿಜಿಟಿ ಮಳೆಯ, ಎಲ್ಲೆಡೆ ಹಸಿರಿನ ಹಿನ್ನೆಲೆಯಲ್ಲಿ ಈ ಗುಹೆಗಳು ಇನ್ನೂ ಚಿತ್ತಾಕರ್ಷಕವಾಗಿ ಕಾಣುತ್ತಿದ್ದವು. ಮಳೆಯಾದಾಗ ಗುಹೆಯ ಮೇಲಿನಿಂದ ನೀರು ಜಲಪಾತದಂತೆ ಧುಮುಕುವುದು ಇನ್ನೂ ಚೆಂದ. ಇಲ್ಲಿ ಇನ್ನೊಂದು ವಿಷಯವನ್ನೂ ಹೇಳಬೇಕು. ಇಲ್ಲಿ ಆಭರಣಗಳ ತಯಾರಿಕೆಯಲ್ಲಿ ಬಳಸುವ, ಬಣ್ಣಬಣ್ಣದ ಅಗೇಟ್ ಎನ್ನುವ ಕಲ್ಲುಗಳು ಹೇರಳವಾಗಿ ಸಿಗುತ್ತವೆ. ಅದನ್ನು ಮಾರುವವರು ಎಲ್ಲ ಕಡೆ ಕಾಣಸಿಗುತ್ತಾರೆ.

ಬೌದ್ಧರ ಗುಹೆಗಳಲ್ಲಿ ಹತ್ತನೆಯ ಗುಹೆ ವಿಶ್ವಕರ್ಮ ದೇವಾಲಯವೆಂದೇ ಪ್ರಸಿದ್ಧ. ಅದು ಇಲ್ಲಿಯ ಏಕೈಕ ಚೈತ್ಯಾಗೃಹ (ಪ್ರಾರ್ಥನಾ ಸ್ಥಳ). ಇಲ್ಲಿಯ ಬುದ್ಧನ